# 4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಧಾರವಾಡ

## ಎಸ್. ಸಿ. ನಂ. 50/2025

**ಫಿರ್ಯಾದಿದಾರರು** : ರಾಜ್ಯದ ಪರವಾಗಿ,
ಉಪನಗರ ಪೋಲೀಸ ಠಾಣೆ ,ಧಾರವಾಡ

**ವಿರುದ್ಧ**

**ಆರೋಪಿ** : 1) ಮೈನುದ್ದೀನ್ ಅಬ್ದುಲರೆಹಮಾನ ನದಾಫ
ವಯಸ್ಸುಃ 39 ವರ್ಷ,
ಸಾಃ ಹಾವೇರಿಪೇಟೆ, ಸವದತ್ತಿ ರಸ್ತೆ, ಧಾರವಾಡ

2) ಮಹಬೂಬಅಲಿ ಮಹಮ್ಮದಸಾಬ ಚನ್ನಪಟ್ಟಣ,
ವಯಸ್ಸುಃ 51 ವರ್ಷ,
ಸಾಃ ಹಾವೇರಿ ಪೇಟೆ, ಕಮತಿ ಪ್ಲಾಟ, ಶಿವಗಂಗಾ ನಗರ
ಧಾರಾವಾಡ

## ದೋಷಾರೋಪಣೆ

ಶ್ರೀಮತಿ ಪೂರ್ಣಿಮಾ.ಎನ್.ಪೈ ಬಿ.ಕಾಂ., ಎಲ್.ಎಲ್.ಎಂ IV ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಧಾರವಾಡ ಆದ ನಾನು ಆರೋಪಿತನಾದ ನಿನ್ನ ವಿರುದ್ಧ ಈ ಕೆಳಗಿನಂತೆ ದೋಷಾರೋಪಣೆ ಹೊರಿಸುತ್ತಿದ್ದೇನೆ.

ನಾರ್ಥು ಪೌಲ್ಟ್ರಿಯಲ್ಲಿ ಕೂಲಿ ಕೆಲಸ ಮಾಡುತ್ತಿದ್ದ ಫಿರ್ಯಾದಿಯು ಬಾಕಿ ಉಳಿದ ಕೂಲಿ ಹಣ ಬೇಕು ಎಂದು ಏರು ಧ್ವನಿಯಲ್ಲಿ ಮಾತನಾಡಿದ್ದು ಅದಕ್ಕೆ ಪೌಲ್ಟ್ರಿ ಮೇನೇಜರ ಆತನ ಮೊಬೈಲ ಇಸಿದುಕೊಂಡು ನಿನ್ನ ಕೂಲಿ ಹಾಗೂ ಮೊಬೈಲನ್ನು ಮಾಲೀಕರಿಗೆ ಬೇಟ್ಟಿಯಾಗಿ ತೆಗೆದುಕೊಂಡು ಹೋಗುವಂತೆ ಹೇಳಿದ್ದಕ್ಕೆ ದಿನಾಂಕ 11.08.2024 ರಂದು ಮಧ್ಯಾಹ್ನ 2.30 ಗಂಟೆಗೆ ಫಿರ್ಯಾದಿಯು ಚಾಸಾ.4

ಶಂಶಾದಬೇಗಂ ಗೊರವನಕೊಳ್ಳ ಹಾಗೂ ಚಾಸಾ.5 ಸೈಯದಅಲಿ ಗೊರವನಕೊಳ್ಳ ಇವರನ್ನು ಕರೆದುಕೊಂಡು ಧಾರವಾಡದ ಹಾವೇರಿ ಪೇಟೆಯ ನದಾಫ ಗಲ್ಲಿಯಲ್ಲಿರುವ 1 ನೇ ಆರೋಪಿಯ ಮನೆಗೆ ಹೋಗಿ ನಿಮ್ಮ ಅಡ್ವಾನ್ಸ ರೂ.5000/- ತೆಗೆದುಕೊಂಡು ಬಾಕಿ ರೂ 1400/- ಹಾಗೂ ಮೊಬೈಲ ಕೊಡಿರಿ ಅಂತಾ ಹೇಳಿದ್ದು 1 ನೇ ಆರೋಪಿತನಾದ ನೀನು ಚಾಸಾ.8 ಜುಬೇರ ಬಿಸ್ತಿ ಇವರಿಗೆ ಪೋನ ಕರೆ ಮಾಡಿ ಮಾತನಾಡಿ ಬಡವರ ತೊಂದರೆಯನ್ನು ಅರಿತುಕೊಳ್ಳದೇ ಒಮ್ಮೇಲೆ ಬೈದಾಡಿ ಟೇಬಲ್ ಮೇಲೆ ಇದ್ದ ಯಾವುದೋ ವಸ್ತುವಿನಿಂದ 1 ಮತ್ತು 2 ನೇ ಆರೋಪಿತರಾದ ನೀವು ಫಿರ್ಯಾದಿಯ ಎಡಗಾಲಿಗೆ ಒಗೆದು ಒಳನೋವು ಪಡಿಸಿ ಭಾರತೀಯ ನ್ಯಾಯ ಸಂಹಿತೆ ಕಲಂ 118(1) ಸಹಕಲಂ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ಮತ್ತು 2 ನೇ ಆರೋಪಿತನಾದ ನೀವು ಕೈಯಿಂದ ಚಾಸಾ.5 ರವರ ಕಪಾಳಕ್ಕೆ ಹೊಡೆದು ಒಳನೋವುಪಡಿಸಿ ಭಾರತೀಯ ನ್ಯಾಯ ಸಂಹಿತೆ ಕಲಂ 115(1) ಸಹಕಲಂ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಚಾಸಾ.4 ಮತ್ತು 5 ರವರು ನಿಮ್ಮ ಮೊಬೈಲ ಮತ್ತು ಪಗಾರ ನಿಮ್ಮ ಹತ್ತಿರವೇ ಇಟ್ಟುಕೊಳ್ಳಿ ಎಂದು ಹೇಳಿ ಕಚೇರಿಯಿಂದ ಹೊರಗೆ ಬರುತ್ತಿರುವಾಗ 1 ನೇ ಆರೋಪಿತನಾದ ನೀನು ಚಾಸಾ.4 ಶಂಶಾದ ಬೇಗಂರವರಿಗೆ ಅವಾಚ್ಯ ಶಬ್ಧಗಳಿಂದ ಬೈದು ಎದೆಗೆ ಕೈ ಹಾಕಿ ಮನೆಯಿಂದ ಹೊರಗೆ ದೂಕಿ ಸಾರ್ವಜನಿಕವಾಗಿ ಅವಮಾನಪಡಿಸಿ ಭಾರತೀಯ ನ್ಯಾಯ ಸಂಹಿತೆ ಕಲಂ 76 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ನೇ ಆರೋಪಿತನಾದ ನೀವು ಚಾಸಾ.4 ರವರಿಗೆ ತೇರಿ ಮಾಕಿ ಚೂತ್ ಅಂತಾ

ಅಶ್ಲೀಲ ಬೈದಾಡಿ ಭಾರತೀಯ ನ್ಯಾಯ ಸಂಹಿತೆ ಕಲಂ 352 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಈ ಮೇಲಿನ ಆರೋಪಣೆಗೆ ಮೇಲೆ ಹೇಳಿದ ನ್ಯಾಯಾಲಯದಿಂದ ವಿಚಾರಣೆಗೊಳಪಡತಕ್ಕದ್ದು ಎಂದು ಈ ಮೂಲಕ ನಿರ್ದೇಶಿಸುತ್ತಿದ್ದೇನೆ.

ದಿನಾಂಕ: 23.06.2026 IV ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಧಾರವಾಡ.

# <u>4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ</u>

## ಧಾರವಾಡ

**ಎಸ್. ಸಿ. ನಂ. 50/2025**

**ಫಿರ್ಯಾದಿದಾರರು** : ರಾಜ್ಯದ ಪರವಾಗಿ,
ಉಪನಗರ ಪೋಲೀಸ ಠಾಣೆ ,ಧಾರವಾಡ

**ವಿರುದ್ಧ**

**ಆರೋಪಿ** : 1) ಮೈನುದ್ದೀನ್ ಅಬ್ದುಲರೆಹಮಾನ ನದಾಫ
ವಯಸ್ಸುಃ 39 ವರ್ಷ,
ಸಾಃ ಹಾವೇರಿಪೇಟೆ, ಸವದತ್ತಿ ರಸ್ತೆ, ಧಾರವಾಡ

**<u>ಹೇಳಿಕೆ</u>**

ಪ್ರಶ್ನೆಃ1 ಈಗ ಓದಿ ಹೇಳಿ ವಿವರಿಸಿದ ಆರೋಪಣೆಯನ್ನು ಕೇಳಿದಿರಾ ಮತ್ತು ಅರ್ಥ ಆಗಿದೆಯಾ?

ಉತ್ತರಃ ಹೌದು

ಪ್ರಶ್ನೆಃ2 ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಗೆ ಬಯಸುವಿರೋ?

ಉತ್ತರಃ ತಪ್ಪು ಮಾಡಿಲ್ಲ. ವಿಚಾರಣೆಯಾಗಬೇಕು.

(ಆರೋಪಣೆಗಳನ್ನು ಆರೋಪಿತನಿಗೆ ಓದಿ ಹೇಳಿ ಆತನು ನೀಡಿದ ಉತ್ತರಗಳನ್ನು ಯಥಾವತ್ತಾಗಿ ಈ ದಿನ ಅಬಿಲೇಖಿಸಿಕೊಳ್ಳಲಾಯಿತು)

ದಿನಾಂಕ: 23.06.2026 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಧಾರವಾಡ

# <u>4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ</u>

## ಧಾರವಾಡ

**ಎಸ್. ಸಿ. ನಂ. 50/2025**

**ಫಿರ್ಯಾದಿದಾರರು** : ರಾಜ್ಯದ ಪರವಾಗಿ,
ಉಪನಗರ ಪೋಲೀಸ ಠಾಣೆ ,ಧಾರವಾಡ

**ವಿರುದ್ಧ**

**ಆರೋಪಿ** : 2) ಮಹಬೂಬಅಲಿ ಮಹಮ್ಮದಸಾಬ ಚನ್ನಪಟ್ಟಣ,
ವಯಸ್ಸುಃ 51 ವರ್ಷ,
ಸಾಃ ಹಾವೇರಿ ಪೇಟೆ, ಕಮತಿ ಪ್ಲಾಟ, ಶಿವಗಂಗಾ ನಗರ
ಧಾರಾವಾಡ

<u>**ಹೇಳಿಕೆ**</u>

ಪ್ರಶ್ನೆಃ1 ಈಗ ಓದಿ ಹೇಳಿ ವಿವರಿಸಿದ ಆರೋಪಣೆಯನ್ನು ಕೇಳಿದಿರಾ ಮತ್ತು ಅರ್ಥ ಆಗಿದೆಯಾ?

ಉತ್ತರಃ ಹೌದು

ಪ್ರಶ್ನೆಃ2 ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಗೆ ಬಯಸುವಿರೋ?

ಉತ್ತರಃ ತಪ್ಪು ಮಾಡಿಲ್ಲ. ವಿಚಾರಣೆಯಾಗಬೇಕು.

(ಆರೋಪಣೆಗಳನ್ನು ಆರೋಪಿತನಿಗೆ ಓದಿ ಹೇಳಿ ಆತನು ನೀಡಿದ ಉತ್ತರಗಳನ್ನು ಯಥಾವತ್ತಾಗಿ ಈ ದಿನ ಅಬಿಲೇಖಿಸಿಕೊಳ್ಳಲಾಯಿತು)

ದಿನಾಂಕ: 23.06.2026 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಧಾರವಾಡ